**ಸಾಕ್ಷಿಯನ್ನು ಕರೆಸಲಾಯಿತು. ಪ್ರಮಾಣ ವಚನ ಮಾಡಿಸಲಾಯಿತು.**

**ದಿಃ12.03.2026**

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ ಎಸ್ ಎಂ ವಕೀಲರಿಂದಃ**

ನಾನು ಎಂ ಎ ಪದವಿದರಳಾಗಿರುತ್ತೇನೆ. ನನಗೆ ಆರೋಪಿ 5-6 ವರ್ಷಗಳಿಂದ ಪರಿಚಯವಿರುತ್ತಾರೆ. ಆರೋಪಿ ಅರಣ್ಯ ಇಲಾಖೆಯಲ್ಲಿ ನಿವೃತ್ತ ನೌಕರನಾಗಿರುತ್ತಾರೆ. ಆರೋಪಿ ಮೊದಲು ಬಾಳೇಗದ್ದೆಯಲ್ಲಿ ವಾಸವಾಗಿದ್ದರು ಎಂದರೆ ಸರಿ. ಆರೋಪಿ 2020 ರಲ್ಲಿ ಮನೆ ಕಟ್ಟಲು ಪ್ರಾರಂಭಿಸಿರುತ್ತಾರೆ. ಆರೋಪಿ ದಿಃ 04.03.2024 ರಲ್ಲಿ ಸಾಲ ಪಡೆದಿರುತ್ತಾರೆ. ಫೆಬ್ರವರಿ ಕೊನೆ ವಾರದಲ್ಲಿ ಸಾಲ ಬೇಕು ಎಂದು ಕೇಳಿರುತ್ತಾರೆ. ಆರೋಪಿಗೆ ನಮ್ಮ ಮನೆಯಲ್ಲಿ ಸಾಲ ನೀಡಿರುತ್ತೇನೆ. ಸದರಿ ವಿಚಾರವನ್ನು ದೂರಿನಲ್ಲಿ ಬರೆದಿರುತ್ತೇನೆ. ಹಣ ನೀಡುವಾಗ ಆರೋಪಿ ಮಾತ್ರ ಬಂದಿದ್ದರು. ಹಣ ನೀಡುವಾಗ ನಮ್ಮ ಮನೆಯಲ್ಲಿ ನನ್ನ ಗಂಡ ಮತ್ತು ಮಕ್ಕಳು ಇದ್ದರು. ಆರೋಪಿಗೆ ಹಣವನ್ನು ನಗದು ರೂಪದಲ್ಲಿ ನೀಡಿರುತ್ತೇನೆ. ನನಗೆ ಕೃಷಿಯಿಂದ ಹಣ ಬಂದಿರುತ್ತದೆ ಮತ್ತು ಸಂಘಗಳಿಂದ ಸಾಲ ಪಡೆದಿದ್ದೆ. ಅದರ ಹಣ ಇಟ್ಟುಕೊಂಡಿದ್ದೆ. ಆರೋಪಿ ದಿಃ 01.07.2024 ರಂದು ನಿ ಪಿ 1 ಚೆಕ್ ನೀಡಿರುತ್ತಾರೆ.

ನಿ ಪಿ 1 ಚೆಕಗೆ ಆರೋಪಿ ಸಹಿ ಮಾಡಿ ನೀಡಿರುತ್ತಾರೆ. ಚೆಕ್ ನ್ನು ಆರೋಪಿ ಬರೆದುಕೊಟ್ಟಿರುತ್ತಾರೆ. ನಿ ಪಿ 1 ರಲ್ಲಿ ಸಹಿಗೂ ಬರವಣಿಗೆಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ. ನಿ ಪಿ 1 ರಲ್ಲಿ ಆರೋಪಿ ಸಹಿ ಇರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ ನ್ನು ನಾನು 01.07.2024 ರಲ್ಲಿ ಬ್ಯಾಂಕ್ ಗೆ ಹಾಕಿರುತ್ತೇನೆ. ಆರೋಪಿಗೆ 08.07.2024 ರಂದು ವಕೀಲರ ಮೂಲಕ ನೋಟೀಸ್ ಕಳುಹಿಸಿರುತ್ತೇನೆ. ಚೆಕ್ ಅಮಾನ್ಯವಾಗಿರುವ ಬಗ್ಗೆ ಆರೋಪಿಯನ್ನು 04.07.2024 ಮತ್ತು 05.07.2024 ರಂದು ಭೇಟಿ ಮಾಡಿ ಕೇಳಿದ್ದೆ. ಚೆಕ್ ನ ಮೇಲೆ ನಾನೇ ಬರವಣಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿ ಪಿ 1 ಚೆಕ್ ನಲ್ಲಿ ಬರವಣಿಗೆ ಮತ್ತು ಸಹಿ ಬೇರೆ ಶಾಯಿ ಇರುತ್ತದೆಂದರೆ ಅದನ್ನು ಅವರೇ ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ.

ಆರೋಪಿ 2019 ರಲ್ಲಿ ಮನೆ ಕಟ್ಟಿರುತ್ತಾರೆಂದರೆ ಸರಿ. ಆ ಸಮಯದಲ್ಲಿ ಅವರ ಮಗನ ಮದುವೆಯೂ ಸಹ ಆಗಿರುತ್ತದೆ. ಅವರು ಬ್ಯಾಂಕ್ ನಲ್ಲಿ ಲೋನ್ ಮಾಡಿ ಮನೆ

ಕಟ್ಟಿರುತ್ತಾರೆಂದರೆ ಗೊತ್ತಿಲ್ಲ. ಆರೋಪಿಗೆ ತಮ್ಮ ನಿವೃತ್ತಿ ಹಣದಿಂದ ಮನೆ ಕಟ್ಟಿರುತ್ತಾರೆಂದರೆ ಸಾಕ್ಷಿ ನಿವೃತ್ತಿ ಹಣ ಬಂದಿರುವುದಿಲ್ಲ ಎಂದು ಹೇಳಿ ನನ್ನ ಬಳಿ ಸಾಲ ಪಡೆದಿರುತ್ತಾರೆಂದು ನುಡಿಯುತ್ತಾರೆ. ಆರೋಪಿ ನನ್ನ ಬಳಿ ಯಾವುದೇ ಸಾಲ ಪಡೆದಿಲ್ಲ ಮತ್ತು ಯಾವುದೇ ಸಾಲ ಕೇಳಿಲ್ಲ ಎಂದರೆ ಸರಿಯಲ್ಲ. ಆರೋಪಿ ಕುಣಿಗನಹಳ್ಳಿ ಹಳೇ ಮನೆಯಿಂದ ಹೊಸ ಮನೆಗೆ ವಸ್ತುಗಳನ್ನು ಸಾಗಿಸುವಾಗ ಅವರ ಚೆಕ್ ಕಳೆದು ಹೋಗಿದ್ದು ಅದನ್ನು ದುರುಪಯೋಗ ಪಡಿಸಿಕೊಂಡು ನಾನು ಈ ಕೇಸನ್ನು ಹಾಕಿರುತ್ತೇನೆಂದರೆ ಸರಿಯಲ್ಲ. ನಾನು ಬಡ್ಡಿಗಾಗಿ ಹಣ ನೀಡುತ್ತೇನೆಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

**ಮರುವಿಚಾರಣೆಃ ಇಲ್ಲ**

**ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಓ ಹೆ ಕೇ ಸ ಇ**

ಸಹಿ/-

**ಪ್ರಧಾನ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ ಸಕಲೇಶಪುರ**